**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ನ್ಯಾಯಾಲಯ ಆಳಂದ</u>**

**<u>ಸಿ.ಸಿ. ನಂ. 3631/2023</u>**

ಪಿರ್ಯಾದಿ ಕರ್ನಾಟಕ ಸರ್ಕಾರದ ಪರ
ಪಿ.ಎಸ್.ಐ ಮಾದನ ಹಿಪ್ಪರಗಾ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರು 1. ನಾಗೇಶ ತಂದೆ ಶಿವಶರಣ ಹೀರತೋಟ,
ವಯಃ 32ವರ್ಷ, ಸಾಃ ಮೈಂದರ್ಗಿ ಗ್ರಾಮ,
ತಾಃ ಅಕ್ಕಲಕೋಟ್ ಜಿಲ್ಲಾಃ ಸೋಲಾಪೂರ.

**<u>ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಯ ಹೇಳಿಕೆ</u>**

ಪ್ರಶ್ನೆ 1 ನ್ಯಾಯಾಲಯದ ಮುಂದೆ ಅಭಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ ಆರೋಪಿ.**ಕೇಳಿರುತ್ತೇವೆ**

ಪ್ರಶ್ನೆ 2. **ಸಿ.ಡಬ್ಲೂ. 1. ಪಿ.ಡಬ್ಲೂ. 1. ಶಿವರಾಜಕುಮಾರ ತಂದೆ ಮಲ್ಲಿಕಾರ್ಜುನ,** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ಜೂನ್ 2022 ರಿಂದ ಡಿಸೆಂಬರರವಗೆ ಆಳಂದದಲ್ಲಿ ಕಾರ್ಯುನಿರ್ವಹಿಸಿ ನಿಯೋಜನೆ ಮೇರೆಗೆ ಜೇವರ್ಗಿಗೆ ಹೋಗಿರುತ್ತೇನೆ, ಆರೋಪಿಯ ಪರಿಚಯ ಇರುತ್ತದೆ. ಚಾಸಾ-2 ರಿಂದ 13 ರವರ ಪರಿಚಯ ಇರುತ್ತದೆ. ದಿ: 07.01.2023 ರಂದು ತಹಶೀಲ ಕಛೇರಿಯಲ್ಲಿ ಕಾರ್ಯ ನಿರ್ವಹಿಸುವಾಗ ಮಾದನ ಹಿಪ್ಪರಗಾ ಪೋಲಿಸ ಠಾಣೆಯಿಂದ ಒಬ್ಬ ಪೋಲಿಸ ಸಿಬ್ಬಂದಿ ಒಂದು ಪತ್ರ ಪಡೆದುಕೊಂಡು ಬಂದಿದ್ದು. ಅವರು ದಸ್ತು ಕರ್ತವ್ಯದಲ್ಲಿ ಇದ್ದಾಗ ಒಂದ ವಾಹನದ ಸಂ: ಎಂ,ಎಚ್.13 ಡಿ.ಕ್ಯೂ.4073 ವಾಹನದಲ್ಲಿ ಅಕ್ರಮವಾಗಿ ಪಡಿತರ ಚೀಟಿಯ ಅಕ್ಕಿಯನ್ನು ಸಾಗಾಣಿಕೆ ಮಾಡಿತ್ತಿದ್ದು ಅದನ್ನು ಹಿಡಿದು ಪೋಲಿಸ ಠಾಣೆಯಲ್ಲಿ ನಿಲ್ಲಿಸಿದ್ದು ಅದನ್ನು ಪರಿಶೀಲಿಸಿ ನಮಗೆ ವರದಿ ಸಲ್ಲಿಸುವಂತೆ ಅರ್ಜಿ ನೀಡಿದರು. ಅದರಂತೆ ನಾವು ನಮ್ಮ ತಹಶೀಲ್ದಾರವರಿಗೆ ಮೌಖಿಕವಾಗಿ ತಿಳಿಸಿ ನಾನು ಹಾಗೂ ಚಾಸಾ-4 ರವರು ಇಬ್ಬರು ಕೊಡಿಜಕೊಂಡು ಹೋದೆವು. ಅಲ್ಲಿ ಒಂದು ಟಾಟಾ ಎಸ್ ವಾಹನ ತೋರಿಸಿ ಪೋಲಿಸರು ವರದಿ ನೀಡುವಂತೆ ಕೋರಿದರು ಅದರಂತೆ ನಾನು ಸುಮಾರು 800 ಚೀಲಗಳ ಪರಿಶೀಲನೆ ಮಾಡಿ ಅದರಲ್ಲಿರುವುದು ಪಡಿತರ ಚೀಟಿಯ ಅಕ್ಕಿಗಳು ಎಂದು ಖಚಿತವಾಯತು. ಅದರಂತೆ ಸ್ಥಳಿಯರಿಗೆ ಪಂಚರಾಗಲು ಕೋರಿಕೊಂಡಾಗ ಅವರು ಒಪ್ಪಿರುವುದಿಲ್ಲ. ನಮ್ಮ ಕಛೇರಿಯವರಾದ ಚಾಸಾ-2-3 ರವರನ್ನು ಕರೆಮುಖಾಂತರ ಕರೆಸಿದೆವು. ತದನಂತರ ಅಕ್ಕಿಯನ್ನು ಅಳಂದ ತಾಲೂಕಿನ ಬುಕ್ಕೆ ವೇ ಬ್ರಜ್ ನಲ್ಲಿ ತೂಕ ಮಾಡಿಸಿ, 3320 ಕೆಜಿ ಎಂದು ಕಂಡು ಬಂದಿರುತ್ತದೆ. ಅದನ್ನು ನಮ್ಮ ಪಡಿತರ ಚೀಟಿಯ

ಗೂಡ್ವಾನಗೆ ತೆಗೆದುಕೊಂಡು ಬಂದು ವ್ಯವಸ್ತಾಪಕರಿಗೆ ಹಸ್ತಾಂತರ ಮಾಡಿದೆವು. ಒಟ್ಟು 29 ಪ್ಯಾಸ್ಟೀಕ್ ಚೀಲಗಳನ್ನು ವ್ಯವಸ್ಥಾಪಕರಿಗೆ ನೀಡಿ ರಸೀದಿ ಪಡೆದವು. ತದನಂತರ ಖಾಲಿವಾಹನವನ್ನು ತೂಕ ಮಾಡಿಸಿ ಅದು 1740 ಕೆಜಿ ಎಂದು ಕಂಡು ಬಂದಿರುತ್ತದೆ. ಪಡಿತರ ಅಕ್ಕಿ ಕೆ.ಜಿ 1580 ಎಂದು ಕಂಡು ಬಂದಿರುತ್ತದೆ. ಅದರ ಮೌಲ್ಯ 29,500/- ಇರುತ್ತದೆ. ಅಲ್ಲಿಂದ ಮತ್ತೆ ಮಾದನ ಹಿಪ್ಪರಗಾ ಠಾಣೆಗೆ ಹೋಗಿ ಪಂಚನಾಮೆ ಮಾಡಿ ದೂರನ್ನು ನೀಡಿದೆವು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತೀರಿ ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೇ 3- **ಸಿ.ಡಬ್ಲೂ.2. ಪಿ. ಡಬ್ಲೂ. 2, ರಾಘವೇಂದ್ರ ತಂದೆ ಮಹಾದೇವ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುವುದಿಲ್ಲ ಆದರೆ ಮುಖ ನೋಡಿರುತ್ತೇನೆ. ಚಾಸಾ-1 ರಿಂದ 13 ರವರ ಪರಿಚಯ ಇರುತ್ತದೆ. ದಿಃ 07.01.2023 ರಂದು ಚಾಸ-1 ರವರು ಕರೆ ಮಾಡಿ ಮಾದನ ಹಿಪ್ಪರಗ ಪೋಲಿಸ್ ಠಾಣೆಗೆ ಬರಲು ತಿಳಿಸಿ ಸರಸಾಂಬದಿಂದ ಹಿರೋಳ್ಳಿ ರಸ್ತೆಯಲ್ಲಿ ಒಂದು ವಾಹನದಲ್ಲಿ ಅಕ್ಕಿ ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ತಿಳಿಸಿದ ಮೇರೆಗೆ ನಾನು ಮಾದನ ಹಿಪ್ಪರಗ ಠಾಣೆಗೆ ಹೋಗಿದ್ದು ಠಾಣೆಯಲ್ಲಿ ಸದರಿ ವಾಹನ ಇದ್ದು ಚಾಸಾ-1ರವರು ನನಗೆ ಪಂಚನಾಗಬೇಕು ಎಂದು ತಿಳಿಸಿದ ಮೇರೆಗೆ ಸದರಿ ವಾಹನವನ್ನು ತಂದು ಆಳಂದ ವೇ ಬ್ರಿಡ್ಜಗೆ ತೆಗೆದುಕೊಂಡು ಬಂದು ನನಗೆ ದಾಖಲೆಯ ಮೇಲೆ ಸಹಿ ಮಾಡಲು ತಿಳಿಸಿದ ಕಾರಣ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ-2 ರಲ್ಲಿರುವ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೆ 4- **ಸಿ.ಡಬ್ಲೂ.3, ಪಿ. ಡಬ್ಲೂ.3 ಸುನೀಲ ತಂದೆ ಶ್ರೀಶೈಲ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿತರ ಪರಿಚಯ ಇರುವುದಿಲ್ಲ. ನಾನು ತಹಸೀಲ ಕಚೇರಿಯಲ್ಲಿ 5 ವರ್ಷ ಕೆಲಸ ಮಾಡಿರುತ್ತೇನೆ. ಚಾಸಾ-1, 2, 4 ರಿಂದ 13 ಪರಿಚಯ ಇರುತ್ತದೆ. ದಿ.07.01.2023 ರಂದು ಚಾಸಾ-1 ರವರು ನನಗೆ ಕರೆ ಮಾಡಿ ಅಕ್ಕಿ ತುಂಬಿದ ಲಾರಿಯನ್ನು ತಡೆಹಿಡಿದಿದ್ದು ಪೋಲಿಸ್ ಠಾಣೆಗೆ ಬರಲು ತಿಳಿಸಿದ್ದು, ನಾನು ಠಾಣೆಗೆ ಹೋದಾಗ ಅಕ್ಕಿ ತುಂಬಿದ ಇಚರ ವಾಹನ ಸಂಖೆ 4073 ಇದ್ದು ಅದರ ಛಾಯಚಿತ್ರಗಳನ್ನು ತೆಗೆದಿರುತ್ತಾರೆ. ಚಾಸಾ-1 ಮತ್ತು 4 ರವರು ಅಕ್ಕಿಯನ್ನು ಪರಿಶೀಲಿಸಿರುತ್ತಾರೆ. ನಂತರ ಸದರಿ ವಾಹನವನ್ನು ವೇಬ್ರಿಜಗೆ ತೆಗೆದುಕೊಂಡು ಹೋಗಿ ತೂಕ ಮಾಡಿಸಿ ಉಗ್ರಾಣಕ್ಕೆ ತೆಗೆದುಕೊಂಡು ಬಂದು ಅಕ್ಕಿಯನ್ನು ಉಗ್ರಾಣದಲ್ಲಿ ಶೇಖರಣೆ ಮಾಡಿ ವಾಹನವನ್ನು ಮಾದನ ಹಿಪ್ಪರಗಾ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ಪಂಚನಾಮೆಯನ್ನು ಮಾಡಿ ಓದಿ ಹೇಳಿ ಸಹಿ ಪಡೆದಿರುತ್ತಾರೆ. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು.ಮಾ.1 ನ್ನು ನೋಡಿ

ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-2 ರಲ್ಲಿನ ಸಹಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೆ 5- **ಸಿ.ಡಬ್ಲ್ಯೂ.04, ಪಿ. ಡಬ್ಲ್ಯೂ. 07 ರವರು ಆದ ಮಹಾದೇವಪ್ಪಾ ತಂದೆ ಶರಣಕುಮಾರ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು 2021 ರಿಂದ ಜೂನ್ 2023 ರವರಗೆ ನಾನು ಆಹಾರ ನಿರೀಕ್ಷಕರು ಅಂತಾ ತಹಶೀಲ್ದಾರ ಕಚೇರಿ ಆಳಂದದಲ್ಲಿ ಕಾರ್ಯ ನಿರ್ವಹಿಸಿದ್ದೇನೆ. ದಿನಾಂಕ 07.01.2023 ರಂದು ಚಾಸಾ-1 ರವರಿಗೆ ಪಿ.ಎಸ್.ಐ ಮಾದನ ಹಿಪ್ಪರಗಾರವರು ಕರೆ ಮಾಡಿ ಪಡಿತರ ಅಕ್ಕಿ ಇರುವ ವಾಹನವನ್ನು ತಂದು ನಿಲ್ಲಿಸಿದ್ದರು, ವಿಷಯ ತಿಳಿಸಿದ್ದು ಸದರಿ ಅವರು ನನಗೆ 05.30 ಗಂಟೆಗೆ ಮಾದನ ಹಿಪ್ಪರಗಾ ಪೋಲಿಸ್ ಠಾಣೆಯಲ್ಲಿ ಪಡಿತರ ಅಕ್ಕಿಯನ್ನು ಜಪ್ತಿ ಪಡಿಸಿದ್ದು ಇದ್ದು ನನಗೂ ಸಹ ಅವರ ಜೊತೆಗೆ ತನಿಖೆಗೆ ಕರೆದುಕೊಂಡು ಹೋಗಿರುತ್ತಾರೆ. ನಾವು 6.30 ಗಂಟೆಗೆ ಮಾದನ ಹಿಪ್ಪರಗಾ ಪೋಲಿಸ್ ಠಾಣೆಗೆ ಹೋಗಿ ನೋಡಿದಾಗ ಪೋಲಿಸ್ ಠಾಣೆಯಲ್ಲಿ ಒಂದು ಟಾಟಾ ವಾಹನ ಸಂಖ್ಯೆ ಎಮ್. ಎಚ್ -13/ಡಿಕ್ಯೂ -4073 ಇತ್ತು. ನಾವು ಸದರಿ ವಾಹನವನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ 29 ಪ್ಲಾಸ್ಟೀಕ್ ಚೀಲದಲ್ಲಿ ಅಕ್ಕಿ ಇತ್ತು. ಸದರಿ ಅಕ್ಕಿಯು ಪಡಿತರ ಚೀಟಿಯನ್ನು ಹೊಂದಿದವರಿಗೆ ನೀಡುವ ಅಕ್ಕಿ ಅಂತಾ ಕಂಡು ಬಂದಿತ್ತು. ಸದರಿ ಒಟ್ಟು ತೂಕ 580 ಕೆ.ಜಿ. ಇದ್ದು, ಸದರಿ ಅಕ್ಕಿಯನ್ನು ತೂಕ ಮಾಡಿ ಗೊಡಾವನಗೆ ಕಳುಹಿಸಿರುತ್ತಾರೆ. ನಂತರ ಚಾಸಾ-1 ರವರು ಆರೋಪಿಯ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ. ಸದರಿ ವಾಹನ ಚಾಲಕ ನಾಗೇಶ ತಂದೆ ಶಿವಶರಣ ಅಂತಾ ಇದ್ದು, ಸದರಿ ವ್ಯಕ್ತಿಯು ಇಂದು ನ್ಯಾಯಾಲಯದಲ್ಲಿ ಇರುತ್ತಾರೆ. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು. ಮಾ.1 ನ್ನು ನೋಡಿ ಗುರುತಿಸುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೆ 6- **ಸಿ.ಡಬ್ಲ್ಯೂ.16, ಪಿ. ಡಬ್ಲ್ಯೂ. 14 ರವರು ಆದ ದಿನೇಶ ತಂದೆ ತಮ್ಮಯ್ಯ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ದಿ.15.04.2022 ರಿಂದ 15.03.2023 ರವರೆಗೆ ಮಾದನ ಹಿಪ್ಪರಗಾ ಪೋಲಿಸ್ ಠಾಣೆಯಲ್ಲಿ ಪಿ.ಎಸ.ಐ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.07.01.2023 ರಂದು ಚಾಸ-1 ರವರು ನೀಡಿದ ದೂರು ಮತ್ತು ಜಪ್ತಿಪಂಚನಾಮೆ, ಆರೋಪಿ, ಮು.ಮಾಲು, ವೇ ಬ್ರಿಡ್ಜ ರಶೀದಿಗಳನ್ನು ಸಲ್ಲಿಸಿದ ಆಧಾರದ ಮೇಲೆ ಗುನ್ನಾ ಸಂಖ್ಯೆ 3/2023 ಅಂತಾ ಪ್ರಕರಣ ದಾಖಲಿಸಿಕೊಂಡು ಚಾಸಾ-14ರವರ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ದಿಃ 07.01.2023 ರಂದು ಚಾಸಾ-2 ರಿಂದ 4ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೆನೆ ದಿಃ 08.01.2023 ರಂದು ಚಾಸಾ-5 ರಿಂದ 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ದಿಃ

08.01.2023 ರಂದು ಆರೋಪಿಯ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ದಿಃ 08.01.2023 ರಂದು ಉಗ್ರಾಣ ವ್ಯವಸ್ಥಾಪಕರು ನೀಡಿದ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಯ ಸ್ವ-ಖುಷಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 01.03.2023 ರಂದು ನ್ಯಾಯಾಲಯದ ಆದೇಶದ ಪ್ರಕಾರ ಜಪ್ತಿ ಪಡಿಸಿದ ವಾಹನವನ್ನು ಬಿಡುಗಡೆ ಮಾಡಿ ರಶೀದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 01.05.2023 ರಂದು ಚಾಸಾ-1ರವರು ನೀಡಿದ ವರದಿಯನ್ನು ಚಾಸಾ-17ರವರು ಸ್ವಿಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಡಿರುತ್ತಾರೆ. ದಿಃ 07.01.2023 ರಂದು ಜೆಸ್ಕಾಂ ಕಚೇರಿಯಿಂದ ವರದಿಯನ್ನು ಚಾಸಾ-17 ರವರು ಪಡೆದುಕೊಂಡಿರುತ್ತಾರೆ. ನಂತರ ಚಾಸಾ-17ರವರು ದಿಃ 20.05.2023 ರಂದು ಚಾಸಾ-17ರವರು ಆರೋಪಿಯ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. **ಸುಳ್ಳು**

ಪ್ರಶ್ನೆ 7 - ನೀವು ಏನನ್ನಾದರೂ ಹೇಳ ಬಯಸುವೀರಾ ?
ಉತ್ತರಃ ಆರೋಪಿ. **ಏನು ಇಲ್ಲಾ**

ಪ್ರಶ್ನೆ 8- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರಃ ಆರೋಪಿ. **ಇಲ್ಲ**

(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

**ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ**
**ನ್ಯಾಯಾಲಯ.**